# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 709 ಗ್ರಾಪಂಕಾ 2016, ದಿನಾಂಕ 21.01.2017
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/273/2017/ಎಆರ್‌ಇ-10, ದಿನಾಂಕ 31.07.2018
3) ಸರ್ಕಾರದ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸ್, ದಿನಾಂಕ 25.08.2018
4) ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 25.09.2018
5) ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 10.10.2018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಎಸಗಿರುವ ಅವ್ಯವಹಾರದ ಸಂಬಂಧ ಕೆಳಕಂಡ ಆರೋಪಗಳ ಮೇಲೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮ 14ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿದೆ.

"That, DGO (1) Sri Sadashiva Channabasappa Shendri, Secretary and (2) Sri Mallasarja Sadashiva Patil, Secretary, Lolasura GP, Gokak Taluk, Belagavi District, have committed the following irregularities and misappropriated the amount towards execution of works under the 'Swatcha Grama Yojane;

a. Under Swacha Grama Yojane toilets were to be constructed as per the approval, but drains constructed instead of constructing toilets, by passing resolution in Grama Sabha without obtaining approval.
b. Concrete road has been formed in Narayanakeri without laying base for the road by spending Rs.12000/-
c. An amount of Rs.11986/- has been spent for forming concrete road from the house of Kudari during Jul 2017 but, no documents have been made available in respect of the same.
d. Concrete drains have been constructed instead of constructing check dam near Prabhanagar colony by passing resolution in Grama Sabha without obtaining approval.
e. Concrete road from the house of Shettappa upto the house of Siddarayi has been formed by spending Rs.24.455/50 but no records for having formed concrete road are available.
f. Fife 'ingugundi' have been formed in ward no.3 and 4 of Silapura by spending Rs.70400/- but no documents have been produced in respect of forming ingugundi.

g. 'Rangamantapa' has been constructed by spending Rs.27000/- but no documents were produced in respect of conctruction of Rangamantapa. There is condition in the order issued by CEO in respect of works to be executed under Swacha Grama Yojane that approval has to be taken from the concerned Executive Engineer for change of works which have been approved already. But no approval has been obtained for executing alternative works instead of works approved.

Thus DGOs 1 and 2, being Government Servants failed to maintain absolute integrity besides devotion to duty and acted in a manner unbecoming of Govt Servants and thus committed misconduct as enumerated U/R 3(1) of KCS(conduct) rules, 1966."

ಮೇಲೆ ಓದಲಾದ (2) ರಲ್ಲಿ, ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರನ್ನು ನೇಮಿಸಲಾಗಿದ್ದು, ವಿಚಾರಣಾಧಿಕಾರಿಯು ಕೆಳಕಂಡ ಆರೋಪದ ಮೇಲೆ ವಿಚಾರಣೆ ನಡೆಸಿ, ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ವರದಿ ಮಾಡಿರುತ್ತಾರೆ.

ಮೇಲೆ ಓದಲಾದ (3)ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರುಗಳಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

<u>ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ:</u>

"ಲೋಳಸೂರ ಗ್ರಾಮ ಪಂಚಾಯತಿ ಪ್ರಭಾರಿ ಕಾರ್ಯದರ್ಶಿಯಾಗಿ ದಿನಾಂಕ 01.04.2007ರಿಂದ 30.09.2007ರವರೆಗೆ ಕರ್ತವ್ಯ ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಸ್ವಚ್ಛ ಭಾರತ ಯೋಜನೆಯಡಿ ಯಾವುದೇ ತರಹದ ಹಣಕಾಸಿನ ವ್ಯವಹಾರ ನಿರ್ವಹಿಸಿರುವುದಿಲ್ಲ. ಆದುದರಿಂದ ಮಾನ್ಯರು ಸದರಿ ವಿಷಯವಾಗಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರು ಮಾಡಿದ ಆರೋಪದಲ್ಲಿ ನನ್ನಿಂದ ಯಾವುದೇ ಹಣಕಾಸಿನ ಅವ್ಯವಹಾರ ನಡೆದಿರುವುದಿಲ್ಲ ಮತ್ತು ಸದರಿ ಅವಧಿಯಲ್ಲಿ ಸ್ವಚ್ಛ ಭಾರತ ಯೋಜನೆ ಹಣಕಾಸಿನ ವ್ಯವಹಾರದಲ್ಲಿ ಬಿಲ್ಲು ಸಂದಾಯ ಮಾಡದಿರುವ ಕುರಿತು ಈಗಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತಿ ಲೋಳಸೂರ ಇವರ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ತನ್ನ ಮೇಲಿನ ಆರೋಪವನ್ನು ಕೈಬಿಡಲು ವಿನಂತಿಸುತ್ತೇನೆ."

<u>ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ</u>

1) ಸ್ವಚ್ಛ ಗ್ರಾಮ ಯೋಜನೆಯು ಗ್ರಾಮ ಪಂಚಾಯತಿಗೆ ಮು.ಕಾ.ನಿ.ಅಧಿಕಾರಿ, ಬೆಳಗಾವಿ ಜಿಪಂ ಇವರಿಂದ ಮಂಜೂರಾಗಿದ್ದು, ಸದರಿ ಯೋಜನೆಯಲ್ಲಿ ತೆಗೆದುಕೊಂಡ ಕಾಮಗಾರಿಗಳನ್ನು ಟೆಂಡರ್ ಮೂಲಕ ಅನುಷ್ಠಾನ ಮಾಡಲು ಶ್ರೀ ಅಶೋಕ ಬಿ.ಗುತ್ತಿಗೆದಾರರಿಗೆ ಒಪ್ಪಿಸಲಾಗಿದೆ. ಅದರಂತೆ ಯೋಝುನೆಯಲ್ಲಿನ ಮಂಜೂರಾದ ಕಾಮಗಾರಿಗಳಲ್ಲಿಉ ಒಂದು ಶಿಂಗಳಾಪೂರ ಗ್ರಾಮಕ್ಕೆ ಸಾರ್ವಜನಿಕ ಶೌಚಾಲಯ ನಿರ್ಮಿಸುವ ಬದಲಾಗಿ ಗಟಾರ(ಚರಂಡಿ) ನಿರ್ಮಿಸಿದ ಬಗ್ಗೆ ಆಪಾದನೆ ಮಾಡಿರುವಂತೆ ಸದರಿ ಕಾಮಗಾರಿಯಾದ ಶೌಚಾಲಯದ ಬದಲಾಗಿ ಚರಂಡಿ ನಿರ್ಮಿಸುವುದರ ಬಗ್ಗೆ ಗ್ರಾಮ ಪಂಚಾಯತಿಯ—ಗ್ರಾಮ ಸಭೆ, ಸಾಮಾನ್ಯ ಸಭೆಯಲ್ಲಿ ಚರ್ಚಿಸಿದಂತೆ ಕಾಮಗಾರಿ ಬದಲಾವಣೆ ಕುರಿತು ನಿರ್ಣಯ ಮಾಡಿಕೊಂಡು ಚರಂಡಿ ಕಾಮಗಾರಿಯನ್ನು ಮಾಡಿದ್ದು ಇರುತ್ತದೆ. ಈ ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳು ಶ್ರೀ ಕಲಾಲ, ಹಿಂದಿನ ನಿವೃತ್ತ ಗ್ರೇಡ್-2 ಕಾರ್ಯದರ್ಶಿ ಗ್ರಾಮ ಪಂಚಾಯತಿ ಲೋಳಸೂರ ಇವರ ಅವಧಿಯಲ್ಲಿ ಇರುತ್ತವೆ.

2) ಶಿಂಗಳಾಪೂರ ಗ್ರಾಮದ ಎಸ್.ಜಿ.ಆರ್.ವಾಯ್. ಯೋಜನೆಯಲ್ಲಿ ನಾರಾಯಣ ಕೆರೆ ಓಣಿಯಲ್ಲಿ ಪರ್ಸಿ ಹಾಕಿಲ್ಲ ಎಂಬುದರ ಬಗ್ಗೆ ಆಪಾದಿತನು ತಿಳಿಸಿದಂತೆ ಸದರ ಕಾಮಗಾರಿಯು ಶ್ರೀ ಕಲಾಲ, ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಇರುತ್ತವೆ.

3) ಶಿಂಗಳಾಪೂರ ಗ್ರಾಮದ ಎಸ್.ಜಿ.ಆರ್.ವಾಯ್. ಯೋಜನೆಯಲ್ಲಿ ಕುದ್ರಿ ಮನೆಯವರಿಗೆ ಕಾಂಕ್ರಿಟ್ ಹಾಕಿದ ಕಾಮಗಾರಿಯು ಶ್ರೀ ಶೇಂದ್ರಿ ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಕಾಮಗಾರಿಯಾಗಿರುತ್ತದೆ.

4) ಶಿಂಗಳಾಪೂರ ಗ್ರಾಮದ ಎಸ್.ಜಿ.ಆರ್.ವಾಯ್. ಕ್ರಿಯಾ ಯೋಜನೆಯಲ್ಲಿ ಪ್ರಭಾ ನಗರದ ಚೆಕ್ ಡ್ಯಾಂ ಕೆಲಸ ತೆಗೆದುಕೊಂಡಿದ್ದು, ಈ ಕಾಮಗಾರಿಯನ್ನು ಬದಲಾವಣೆ ಮಾಡಿ ಚೆಕ್ ಡ್ಯಾಂ ಬದಲಾಗಿ ಸಿ.ಡಿ. ನಿರ್ಮಿಸುವುದರ ಬಗ್ಗೆ ಆಪಾದನೆ ಮಾಡಿರುವುದರ ಬಗ್ಗೆ ಈ ಕಾಮಗಾರಿ ಬದಲಾವಣೆ ಮಾಡುವುದರ ಬಗ್ಗೆ ಸದರ ಪ್ರಭಾ ನಗರದ ಜನರು ಚೆಕ್ ಡ್ಯಾಂ ಬದಲಾಗಿ ಸಿಡಿ ಕಟ್ಟುವುದರ ಬಗ್ಗೆ ಪಂಚಾಯತಿಗೆ ಮನವಿ ಸಲ್ಲಿಸಿದಂತೆ ಈ ಬಗ್ಗೆ ಗ್ರಾಮ ಪಂಚಾಯತಿ ಸಭೆಯಲ್ಲಿ ಚರ್ಚಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ಚೆಕ್ ಡ್ಯಾಂ ಬದಲಾಗಿ ಸಿಡಿ ನಿರ್ಮಿಸುವುದರ ಬಗ್ಗೆ ಸಭೆಯಲ್ಲಿ ನಿರ್ಣಯಿಸಿದಂತೆ ಕಾಮಗಾರಿಯನ್ನು ಬದಲಾವಣೆ ಮಾಡಿ ಚೆಕ್ ಡ್ಯಾಂ ಬದಲಾಗಿ ಸಿಡಿ ನಿರ್ಮಿಸಲಾಗಿದೆ.

5) ಶಿಂಗಳಾಪೂರ ಗ್ರಾಮದ ಎಸ್.ಜಿ.ಆರ್.ವಾಯ್. ಯೋಜನೆಯಲ್ಲಿ ಶೆಟ್ಟಪ್ಪಾ ಮನೆಯಿಂದ ಶಿದ್ರಾಯಿ ಮನೆಯವರೆಗೆ ರಸ್ತೆ ಕಾಮಗಾರಿ ಇದ್ದು, ಈ ಕಾಮಗಾರಿ ಆಗಿರುವುದಿಲ್ಲ ಅಂತ ಆಪಾದಿತರು ತಿಳಿಸಿರುವಂತೆ ಈ ರಸ್ತೆ ಕಾಮಗಾರಿ ಕಾಂಕ್ರಿಟ್ ರಸ್ತೆ ಮಾಡಲಾಗಿದೆ. ಈ ಕಾಮಗಾರಿಯುವ ಸಹ ಶ್ರೀ ಕಲಾಲ, ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಆಗಿರುತ್ತದೆ.

6) ಶಿಂಗಳಾಪೂರ ಗ್ರಾಮದ ಎಸ್.ಜಿ.ಆರ್.ವಾಯ್. ಯೋಜನೆಯಲ್ಲಿ ವಾರ್ಡ ನಂ.3 ಮತ್ತು 4ರಲ್ಲಿ ಎರಡು ಇಂಗು ಗುಂಡಿ ಕಾಮಗಾರಿ ಬಗ್ಗೆ ಆಪಾದಿತರು ತಿಳಿಸಿದಂತೆ ಸದರ ಕಾಮಗಾರಿಗಳು ಶ್ರೀ ಕಲಾಲ, ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಆಗಿರುತ್ತದೆ.

7) ಸ್ವಚ್ಛ ಗ್ರಾಮ ಯೋಜನೆಯಲ್ಲಿ ಶಿಂಗಳಾಪೂರ ಗ್ರಾಮದಲ್ಲಿ ರಂಗ ಮಂಟಪ ಕಟ್ಟಡದ ಕುರಿತು ಈ ಕಾಮಗಾರಿ ಆಗಿರುತ್ತದೆ. ಈ ಕಾಮಗಾರಿ ಕುರಿತು ಮೇಲಧಿಕಾರಿಗಳಿಂದ ಮಂಜೂರಾತಿ ಪಡೆಯದೆ ಇವರುದರ ಬಗ್ಗೆ ತಿಳಿಸಿದಂತೆ ಈ ಕಾಮಗಾರಿಯನ್ನು ಸಹ ಶ್ರೀ ಕಲಾಲ, ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಆಗಿರುತ್ತದೆ.

8) ಕ್ರಮ ಸಂಖ್ಯೆ: 4ರ ಕಾಮಗಾರಿ ಹೊರತಾಗಿ ಎಲ್ಲ ಆಪಾದನೆಗಳ ಕಾಮಗಾರಿಗಳು ಶ್ರೀ ಕಲಾಲ, ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಮತ್ತು ಕ್ರಮ ಸಂಖ್ಯೆ: 3ರ ಕಾಮಗಾರಿ ಶ್ರೀ ಶೇಂದ್ರಿ, ನಿವೃತ್ತ ಕಾರ್ಯದರ್ಶಿ ಇವರ ಅವಧಿಯಲ್ಲಿ ಎಲ್ಲಾ ಕಾಮಗಾರಿಗಳನ್ನು ಯೋಜನೆಹ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಂಡಿರುತ್ತದೆ. ಹಾಗೂ ಪಂಚಾಯತಿಯ ನಿರ್ಣಯದ ಪ್ರಕಾರ ಕಾಮಗಾರಿಗಳನ್ನು ಬದಲಾವಣೆ ಮಾಡಿರುತ್ತದೆ. ಈ ಆಪಾದನೆಗಳನ್ನು ಅನವಶ್ಯಕವಾಗಿ ಬುದ್ಧ್ಯಾಪೂರ್ವಕವಾಗಿ ನನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಿರುವುದರಿಂದ ಅದರಂತೆ ಸದರ ಕಾಮಗಾರಿಗಳನ್ನು ಬದಲಾವಣೆ ಮಾಡುವಾಗ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆ ಅನುಮೋದನೆ ಪಡೆದುಕೊಂಡು ಮಾಡಿರುತ್ತದೆ. ಆದುದರಿಂದ ಮಾನ್ಯರು ಮೇಲ್ಕಾಣಿಸಿದ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ದಂಡನೆಯನ್ನು ವಿಧಿಸುವ ಕ್ರಮವನ್ನು ಕೈಬಿಡಬೇಕೆಂದು ಕೋರಿರುತ್ತಾರೆ."

ವಿಚಾರಣಾಧಿಕಾರಿಯವರು ಸಾಕ್ಷ್ಯಾಧಾರಗಳು, ಹೇಳಿಕೆಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ ಆರೋಪಗಳು ಸಾಬೀತಾಗಿರುವುದಾಗಿರುವ ಹಿನ್ನಲೆಯಲ್ಲಿ, ಸದರಿ ನೌಕರರುಗಳಿಗೆ ಕೆಳಗಿನಂತೆ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

1) ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಾಸುರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತದಲ್ಲಿ ಶೇ.50ರಷ್ಟು ಮೊತ್ತ ರೂ.25,728/-ಗಳನ್ನು ವಸೂಲಿ ಮಾಡುವುದು.

2) ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಲಾಸುರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ವೇತನ ಭತ್ಯೆಗಳಿಂದ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತದಲ್ಲಿ ಶೇ.50ರಷ್ಟು ಮೊತ್ತ ರೂ.25,728/- ಗಳನ್ನು ವಸೂಲಿ ಮಾಡುವುದು.

ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಸದರಿ ನೌಕರರುಗಳಿಗೆ ಮೇಲ್ಕಂಡ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ್ರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸಿನನ್ವಯ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 709 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 28.11.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಆಪಾದಿತ ನೌಕರರುಗಳಿಗೆ ಕೆಳಗಿನಂತೆ ದಂಡನೆಯನ್ನು ವಿಧಿಸಲು ಆದೇಶಿಸಿದೆ.

1) ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಲಾಸುರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತದಲ್ಲಿ ಶೇ.50ರಷ್ಟು ಮೊತ್ತ ರೂ.25,728/-ಗಳನ್ನು ವಸೂಲಿ ಮಾಡುವುದು.

2) ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಲಾಸುರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ವೇತನ ಭತ್ಯೆಗಳಿಂದ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತದಲ್ಲಿ ಶೇ.50ರಷ್ಟು ಮೊತ್ತ ರೂ.25,728/-ಗಳನ್ನು ವಸೂಲಿ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

29/11
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
6) ಕಾರ್ಯನಿರ್ವಾಹಕ ಅಧಿಕಾರಿ, ಗೋಕಾಕ ತಾಲ್ಲೂಕು ಪಂಚಾಯತಿ, ಗೋಕಾಕ, ಬೆಳಗಾವಿ ಜಿಲ್ಲೆ.
7) ಶ್ರೀ ಸದಾಶಿವ ಚನ್ನಬಸಪ್ಪ ಶೇಂದ್ರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ್ರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ
8) ಶ್ರೀ ಮಲ್ಲಸರ್ಜಾ ಸದಾಶಿವ ಪಾಟೀಲ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಲೋಳಸೂರ್ರ ಗ್ರಾಮ ಪಂಚಾಯತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ
9) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.